**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 19-06-2025:**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

3.ನಾವು ಠಾಣೆಗೆ ಹೋದಾಗ ಅಲ್ಲಿ ಒಬ್ಬ ವ್ಯಕ್ತಿ ಕುಳಿತಿದ್ದರು. ಆ ವ್ಯಕ್ತಿಯ ಹೆಸರು ನೀತು ಎಂದು ತನಿಖಾಧಿಕಾರಿ ಹೇಳಿದರು. ಸದರಿ ವ್ಯಕ್ತಿಯು ತಾನು ಖಾತಾ ಬದಲಾವಣೆ ಮತ್ತು ಚೆಕ್ಕುಬಂದಿ ಮಾಡಿಕೊಡಲು ಹೊಸೂರು ಗ್ರಾ.ಪಂ.ಅರ್ಜಿ ಕೊಟ್ಟಿದ್ದು ಅದನ್ನು ಮಾಡಿಕೊಡಲು ಲಂಚ ಕೇಳುತ್ತಿದ್ದಾರೆ, ಈಗ ಆಗ ಎಂದು ಸತಾಯಿಸುತ್ತಿದ್ದಾರೆ, ಅದಕ್ಕೆ 9-3-2017ರಂದು ದೂರುದಾರರು 1ನೇ ಆರೋಪಿತರಿಗೆ ಕರೆ ಮಾಡಿದ್ದರು, 1ನೇ ಆರೋಪಿತರು ಕರೆಯನ್ನು ಕಟ್ ಮಾಡಿ ಸ್ವಲ್ಪ ಸಮಯದ ನಂತರ ಕಂಪ್ಯೂಟರ್ ಆಪರೇಟರ್ ಆದ 2ನೇ ಆರೋಪಿತರು ಫೋನ್ ಮಾಡಿದರು, 2ನೇ ಆರೋಪಿತರು ಖಾತೆ ಬದಲಾವಣೆ ಮತ್ತು ಚೆಕ್ಕುಬಂದಿ ಮಾಡಲು 5000ರೂಪಾಯಿ ಆಗುತ್ತದೆಂದು ಪಿಡಿಒರವರು ಹೇಳಿರುತ್ತಾರೆ, ಅಷ್ಟು ಹಣವನ್ನು ಕೊಟ್ಟು ನಿಮ್ಮ ಕೆಲಸ ಮಾಡಿಸಿಕೊಳ್ಳಿ ಎಂದು ದೂರುದಾರರಿಗೆ ತಿಳಿಸಿದರು. ನಂತರ ದೂರುದಾರರು 1ನೇ ಆರೋಪಿತರಿಗೆ ವಿಚಾರವನ್ನು ತಿಳಿಸಿದಾಗ 1ನೇ ಆರೋಪಿತರು 2ನೇ ಆರೋಪಿತರು ಹೇಳಿದಂತೆ ಮಾಡಿ ಎಂದು ತಿಳಿಸಿದರು, ಅದಕ್ಕೆ ದೂರುದಾರರು 13-3-2017ರಂದು ತಾನು ಹಣ ಕೊಡುವುದಾಗಿ ಹೇಳಿದರು. ಈ ಸಂಭಾಷಣೆಯನ್ನು ತಮ್ಮ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಆ ಸಂಭಾಷಣೆಯ ರೆಕಾರ್ಡ್ ನೊಂದಿಗೆ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರೆನ್ನುವುದು ತಿಳಿಯಿತು. ದೂರುದಾರರು ಹಾಜರುಪಡಿಸಿದ ಮೊಬೈಲ್ ರೆಕಾರ್ಡರನ್ನು ಠಾಣೆಯ ಲ್ಯಾಪ್ ಟಾಪ್ ನಲ್ಲಿ ಹಾಕಿ ಸಿಡಿ ತಯಾರಿಸಿ ನಮಗೆ ಪ್ರಸಾರ ಮಾಡಿ ತೋರಿಸಿದರು. ಒಂದು ಸಿಡಿಯನ್ನು ಖಾಕಿ ಕವರಿನಲ್ಲಿ ಹಾಕಿ ಪ್ಯಾಕು ಮಾಡಿದರು. ಒಂದು ಸಿಡಿಯನ್ನು ದೂರುದಾರರಿಗೆ ಕೊಟ್ಟರು, ಒಂದು ಸಿಡಿಯನ್ನು ತನಿಖಾಧಿಕಾರಿ ಇಟ್ಟುಕೊಂಡರು.

4.ತನಿಖಾಧಿಕಾರಿ ಠಾಣೆಯಲ್ಲಿ ಸೋಡಿಯಂ ಕಾರ್ಬೋನೇಟ್ ಪುಡಿ ಹಾಗೂ

ಫಿನಾಫ್ತಲಿನ್ ಪುಡಿ ಬಗ್ಗೆ ನಮಗೆ ವಿವರಿಸಿದರು. ಪಿರ್ಯಾದಿಯವರು ಹಾಜರುಪಡಿಸಿದ ನೋಟುಗಳಿಗೆ ರೂಪೇಶ್ ಎಂಬುವವರ ಮೂಲಕ ತನಿಖಾಧಿಕಾರಿ ಫಿನಾಫ್ತಲಿನ್ ಪುಡಿಯನ್ನು ಲೇಪನ ಮಾಡಿಸಿದರು. ಆ ನೋಟುಗಳನ್ನು ತನಿಖಾಧಿಕಾರಿ ನನ್ನ ಕೈಗೆ ಕೊಟ್ಟರು, ಅದನ್ನು ನಾನು ಪಿರ್ಯಾದಿಯವರು ಹ್ಯಾಂಡ್ ಪರ್ಸ್ ನಲ್ಲಿ ಇಟ್ಟೆನು. ನಂತರ ಸಾಕ್ಷಿ-2 ರವರ ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿದರು. ಇದಕ್ಕೆ ಯಾವುದೇ ಬಣ್ಣ ಇರಲಿಲ್ಲ. ನಂತರ ಇನ್ನೊಂದು ಬಟ್ಟಲಿನಲ್ಲಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ನನ್ನ ಕೈಬೆರಳುಗಳನ್ನು ಅದ್ದಿಸಿದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು. ತನಿಖಾಧಿಕಾರಿಯು ಫಿನಾಫ್ತಲಿನ್ ಪುಡಿ ಲೇಪಿತ ಹಣವನ್ನು ಒಂದುವೇಳೆ ಆರೋಪಿತರು ಪಡೆದುಕೊಂಡಲ್ಲಿ, ಅವರ ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿದರೆ ಆ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗುತ್ತದೆ ಎಂದು ತಿಳಿಸಿದರು. ನನ್ನ ಕೈಬೆರಳುಗಳನ್ನು ತೊಳೆಸಿದ ದ್ರಾವಣವನ್ನು ಒಂದು ಬಾಟಲಿಯಲ್ಲಿ ಹಾಕಿ ಪ್ಯಾಕು ಮಾಡಿ ಸೀಲು ಮಾಡಿದರು. ದೂರುದಾರರು ಪಿಡಿಒರವರನ್ನು ಭೇಟಿಯಾದಾಗ ತನ್ನ ಕೆಲಸದ ಬಗ್ಗೆ ವಿಚಾರ ಮಾಡಬೇಕು, ಆಗ ಅವರು ಲಂಚದ ಹಣ ಎಲ್ಲಿ ಎಂದು ಕೇಳಿದರೆ ಫಿನಾಫ್ತಲಿನ್ಪುಡಿಲೇಪಿತ ಹಣವನ್ನು ಅವರಿಗೆ ನೀಡಬೇಕು, ಅವರು ಸ್ವೀಕರಿಸಿದಲ್ಲಿ ಅದನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆಂದು ನೋಡಿಕೊಂಡು ಬಲಗೈನಿಂದ ತಲೆಸವರುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿದರು. ಈ ಎಲ್ಲ ಪ್ರಕ್ರಿಯೆ ಬಗ್ಗೆ ತನಿಖಾಧಿಕಾರಿ ಪಂಚನಾಮೆ ನಡೆಸಿದರು. ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ನಿಪಿ-2 ಆ ಪಂಚನಾಮೆಯಾಗಿದ್ದು ಸಾಕ್ಷಿಯು ಗುರುತಿಸಿದ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನನ್ನ ಕೈತೊಳೆಸಿದ ದ್ರಾವಣವನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು ಎಂ.ಓ.1 ಎಂದು ಗುರುತಿಸಲಾಯಿತು. ಈಗ ತೋರಿಸಿದ ಕವರಿನ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಕವರನ್ನು ನಿಪಿ-5 ಎಂದು ಚೀಟಿಯನ್ನು ನಿಪಿ-5(1) ಎಂದು , ಸಾಕ್ಷಿಯ ಸಹಿಯನ್ನು ನಿಪಿ-5(1)(ಎ) ಎಂದು ಗುರುತಿಸಲಾಯಿತು. ಈ ಸಹಿಯನ್ನು ತನಿಖಾಧಿಕಾರಿಯು ಒಂದು ಧ್ವನಿಸಂಭಾಷಣೆಯ ಒಂದು ಸಿಡಿಯನ್ನು ಪ್ಯಾಕು ಮಾಡಿ ಸೀಲು ಮಾಡಿದಾಗ ಹಾಕಿರುತ್ತೇನೆ.

(ಮಾನ್ಯ ಪಿಪಿ ರವರು ನಿಪಿ-5ರ ಸೀಲನ್ನು ತೆರೆದು ಸಾಕ್ಷಿಗೆ ತೋರಿಸಲು ಅನುಮತಿ ಕೋರಿರುತ್ತಾರೆ, ಅನುಮತಿಸಿದೆ) ನಿಪಿ-5ರ ಸೀಲನ್ನು ತೆರೆದು ಅದರಲ್ಲಿರುವ ಒಂದು ಸಿಡಿಯನ್ನು ತೋರಿಸಿದಾಗ ಸಾಕ್ಷಿಯು ಇದೇ ಸಿಡಿ ವಶಪಡಿಸಿಕೊಂಡಿರುವುದು ಎನ್ನುತ್ತಾರೆ. ಆ ಸಿಡಿಯನ್ನು ನಿಪಿ-6 ಎಂದು ಗುರುತಿಸಲಾಯಿತು. ನಿಪಿ-6ರ ಮೇಲೂ ನಾನು ಸಹಿ ಹಾಕಿರುತ್ತೇನೆ. ಅದನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

5.ನಂತರದಲ್ಲಿ ತನಿಖಾಧಿಕಾರಿ ದೂರುದಾರರನ್ನು ನನ್ನನ್ನು, ಚಾಸಾ-3ರವರನ್ನು ಮತ್ತು ಸಿಬ್ಬಂದಿಗಳನ್ನು ಕರೆದುಕೊಂಡುಇಲಾಖಾ ವಾಹನದಲ್ಲಿ ಹೊಸೂರು ಗ್ರಾ.ಪಂ ಬಳಿ ಹೋದರು. ಆಗ ಸಮಯ ಸುಮಾರು ಮಧ್ಯಾಹ್ನ 3 ಗಂಟೆ ಆಗಿತ್ತು. ತನಿಖಾಧಿಕಾರಿಯು ಪ್ರಾಯೋಗಿಕ ಪಂಚನಾಮೆ ವೇಳೆ ಹೇಳಿದ ತಿಳುವಳಿಕೆಯನ್ನು ಮತ್ತೊಮ್ಮೆ ತಿಳಿಸಿ, ಪಿರ್ಯಾದಿ ಹಾಗೂ ಚಾಸಾ-3ರವರನ್ನು ಆರೋಪಿತರನ್ನು ಕಾಣಲು 1ನೇ ಆರೋಪಿತರ ಕಛೇರಿಗೆ ಕಳುಹಿಸಿಕೊಟ್ಟರು. ಆ ರೀತಿ 1ನೇ ಆರೋಪಿತರ ಕಛೇರಿಗೆ ಹೋದ ಸ್ವಲ್ಪ ಸಮಯದ ನಂತರ ದೂರುದಾರರು ಕಛೇರಿಯಿಂದ ಹೊರಬಂದು ತಲೆಸವರುವ ಮೂಲಕ ಸಂಜ್ಞೆ ನೀಡಿದರು. ಆಗ ನಾನು, ತನಿಖಾಧಿಕಾರಿ ಹಾಗೂ ಸಿಬ್ಬಂದಿಗಳುಅಲ್ಲಿಗೆ ಹೋದೆವು. ತನಿಖಾಧಿಕಾರಿ ದೂರುದಾರರ ಬಳಿ ಕೇಳಿದಾಗ ತಾನು 1ನೇ ಆರೋಪಿತರಲ್ಲಿ ತನ್ನ ಕೆಲಸದ ಬಗ್ಗೆ ಕೇಳಿದಾಗ, ಕೆಲಸವನ್ನು ಮಾಡಿಕೊಡುವುದಾಗಿ ಹೇಳಿದರು, ತಾನು ಆ ಫಿನಾಪ್ತಲಿನ್ ಪುಡಿಲೇಪಿತ ಹಣವನ್ನು ಅವರಿಗೆ ಕೊಡಲು ಹೋದಾಗ 2ನೇ ಆರೋಪಿತರಿಗೆ ಕೊಡುವಂತೆ ತಿಳಿಸಿದರು, ಅದರಂತೆ ಆ ಹಣವನ್ನು ಅವರು 2ನೇ ಆರೋಪಿತರಿಗೆ ನೀಡಿರುವುದಾಗಿಯೂ, ಅದನ್ನು ಸ್ವೀಕರಿಸಿ ಅದನ್ನು ತಾವು ಕರ್ತವ್ಯ ನಿರ್ವಹಿಸುತ್ತಿದ್ದ ಟೇಬಲ್ ಡ್ರಾವರ್ ನಲ್ಲಿ ಇರಿಸಿಕೊಂಡರೆಂದು ತಿಳಿಸಿದರು. ನಂತರ ತನಿಖಾಧಿಕಾರಿ ದೂರುದಾರರಿಗೆ ಆರೋಪಿತ ಅಧಿಕಾರಿಯನ್ನು ತೋರಿಸುವಂತೆ ಹೇಳಿದರು. ದೂರುದಾರರು 1ನೇ ಆರೋಪಿತರನ್ನು ತೋರಿಸಿದರು. ತನಿಖಾಧಿಕಾರಿಯು ಅವರಿಗೆ ನಮ್ಮೆಲ್ಲರ ಪರಿಚಯ ಮಾಡಿಸಿದರು, ನಂತರ ಲಂಚದ ಹಣ ಎಲ್ಲಿ ಎಂದು ಕೇಳಿನಿರು. ಆಗ 1ನೇ

ಆರೋಪಿಯು ತಮ್ಮ ಲೆದರ್ ಬ್ಯಾಗ್ ನ 2ನೆ ಜಿಪ್ ನಿಂದ ತೆಗೆದು ಹಾಜರುಪಡಿಸಿದರು. ಆ ಕವರನ್ನು ಪರಿಶೀಲಿಸಿದಾಗ ಅದರಲ್ಲಿ ನೋಟುಗಳಿದ್ದು ಆ ನೋಟುಗಳ ಸಂಖ್ಯೆ ಮತ್ತು ಮೌಲ್ಯವನ್ನು ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ಬರೆದುಕೊಂಡ ನಿಪಿ-4ರ ಹಾಳೆಯಲ್ಲಿ ನಮೂದಿಸಿದ ಸಂಖ್ಯೆ ಮತ್ತು ಮೌಲ್ಯಕ್ಕೆ ಹೋಲಿಕೆಯಾಗುತ್ತದೆಯೇ ಎಂದು ನನ್ನಲ್ಲಿ ನೋಡುವಂತೆ ಹೇಳಿದರು. ನಾನು ಪರಿಶೀಲಿಸಿದಾಗ ಒಂದಕ್ಕೊಂದು ತಾಳೆಯಾಗುತ್ತಿತ್ತು. ಕವರಿನ ಸಮೇತ ಆ ನೋಟುಗಳನ್ನು ತನಿಖಾಧಿಕಾರಿ ವಶಪಡಿಸಿಕೊಂಡರು. ತನಿಖಾಧಿಕಾರಿಯು ಸೋಡಿಯಂ ಕಾರ್ಬೊನೇಟ್ ದ್ರಾವಣವನ್ನು ತಯಾರಿಸಿದರು. ಒಂದು ಬಟ್ಟಲಿನ ದ್ರಾವಣದಲ್ಲಿ 2ನೇ ಆರೋಪಿತರ ಬಲಗೈ ಬೆರಳುಗಳನ್ನು ಅದ್ದಿಸಿದರು. ಆಗ ಅದು ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು. ನಂತರ ಇನ್ನೊಂದು ಬಟ್ಟಲಿನಲ್ಲಿ ಸೋಡಿಯಂ ಕಾರ್ಬೊನೇಟ್ ದ್ರಾವಣತಯಾರಿಸಿ 1ನೇ ಆರೋಪಿತರ ಕೈಬೆರಳುಗಳನ್ನು ಅದ್ದಿಸಿದರು. ಆಗ ಅದೂ ಕೂಡ ಗುಲಾಬಿ ಬಣ್ಣಕ್ಕೆ ತಿರುಗಿತು. ಅವೆರಡನ್ನೂ ಪ್ರತ್ಯೇಕ ಬಾಟಲಿಯಲ್ಲಿ ತನಿಖಾಧಿಕಾರಿ ಸಂಗ್ರಹಿಸಿ ಪ್ಯಾಕು ಮಾಡಿ ಸೀಲು ಮಾಡಿದರು. 2ನೇ ಆರೋಪಿತರ ಕೈಬೆರಳುಗಳನ್ನು ತೊಳೆಸಿದ ದ್ರಾವಣವನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೋರಿಸಿದ ಬಾಟಲಿಯಲ್ಲಿರುವ ದ್ರಾವಣ ಅದೇ ಆಗಿರುತ್ತದೆ. ಅದನ್ನು ಎಂ.ಒ.2 ಎಂದು ಗುರುತಿಸಲಾಯಿತು. 1ನೇ ಆರೋಪಿತರ ಕೈಬೆರಳುಗಳನ್ನು ತೊಳೆಸಿದ ದ್ರಾವಣವನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೋರಿಸಿದ ಬಾಟಲಿಯಲ್ಲಿರುವ ದ್ರಾವಣ ಅದೇ ಆಗಿರುತ್ತದೆ. ಅದನ್ನು ಎಂ.ಒ.3 ಎಂದು ಗುರುತಿಸಲಾಯಿತು.

6.ವಿಚಾರವನ್ನು ಆರೋಪಿತರ ಮೇಲಧಿಕಾರಿಗಳಿಗೆ ತಿಳಿಸಿದರು. ಅವರು ಕಾನೂನು ರೀತ್ಯ ಕ್ರಮ ಜರುಗಿಸುವಂತೆ ಹೇಳಿದರು. ನಂತರ ಕಛೇರಿಯಲ್ಲಿದ್ದ ಪಂಚಾಯಿತಿ ಅಧ್ಯಕ್ಷರಾದ ಜರೀನಾ ಮಂಜುನಾಥ್ ರವರಿಗೆ ಸಿಡಿಯಲ್ಲಿರುವ ಧ್ವನಿಯನ್ನು ಗುರುತಿಸುವಂತೆ ಹೇಳಿದರು. ಅದರಲ್ಲಿರುವ ಧ್ವನಿಯನ್ನು ಪಂಚಾಯಿತಿ ಅಧ್ಯಕ್ಷರು ಗುರುತಿಸಿ ಅದು 1 ಮತ್ತು 2ನೇ

ಆರೋಪಿತರದೆಂದು ಹೇಳಿದರು. ನಂತರ ತನಿಖಾಧಿಕಾರಿಯು 1ನೇ ಆರೋಪಿತರಿಗೆ ಪಿರ್ಯಾದಿಗೆ ಸಂಬಂಧಪಟ್ಟ ಕಡತಗಳು ಎಲ್ಲಿ ಎಂದು ಕೇಳಿದರು. ಆಗ 1ನೇ ಆರೋಪಿ 2ನೇ ಆರೋಪಿತರ ಬಳಿ ಇದ್ದ ಒಂದು ಫೈಲನ್ನು ತೆಗೆದುಕೊಂಡು ಹಾಜರುಪಡಿಸಿದರು. ಅದರಲ್ಲಿ ಪಿರ್ಯಾದಿಯವರ ತಮ್ಮ ನಳಂದ ಎಂಬುವವರು ಖಾತೆ ಬದಲಾವಣೆ ಮತ್ತು ಚೆಕ್ಕುಬಂದಿಗೆ ಸಂಬಂಧಿಸಿದಂತೆ ನೀಡಿರುವ ಅರ್ಜಿ ಇತ್ಯಾದಿ ಒಟ್ಟು 11 ಪುಟಗಳ ದಾಖಲೆಗಳಿದ್ದವು. ಆ ದಾಖಲೆಗಳ ಫೋಟೋ ಪ್ರತಿ ಪಡೆದುಕೊಂಡು ಅದನ್ನು ದೃಢೀಕರಿಸಿ ನಂತರ ಮೂಲ ಕಡತವನ್ನು ಪಂಚಾಯಿತಿ ಅಧ್ಯಕ್ಷರಿಗೆ ಹಸ್ತಾಂತರಿಸಿದರು. ಪಂಚಾಯಿತಿಯ ಹಾಜರಾತಿ ಪುಸ್ತಕದ ಪ್ರತಿಯನ್ನು ಕೂಡ ದೃಢೀಕರಿಸಿಕೊಂಡು ಪಡೆದುಕೊಂಡರು. ಹಾಜರಾತಿ ಪುಸ್ತಕದ ದೃಢೀಕೃತ ಪ್ರತಿ ನೋಡುತ್ತಿದ್ದು ಅದನ್ನು ನಿಪಿ-7 ಎಂದ ಗುರುತಿಸಲಾಯಿತು. ದೂರುದಾರರ ತಮ್ಮನ ಕೆಲಸಕ್ಕೆ ಸಂಬಂಧಿಸಿದ ಕಡತದ ದೃಢೀಕೃತ ನಕಲುಗಳನ್ನು ಈಗ ನೋಡುತ್ತಿದ್ದು ಅದು ಒಟ್ಟು 11 ಹಾಳೆಗಳನ್ನೊಳಗೊಂಡಿದ್ದು ಒಟ್ಟಾಗಿ ನಿಪಿ-8 ಎಂದು ಗುರುತಿಸಲಾಯಿತು.

7.ತನಿಖಾಧಿಕಾರಿಯು 1ನೇ ಆರೋಪಿತರ ಕಛೇರಿಗೆ ಕಳುಹಿಸುವಾಗ ಒಂದು ವಾಯ್ಸ್ ರೆಕಾರ್ಡರನ್ನು ನೀಡಿ ಆರೋಪಿತರು ಮತ್ತು ತನ್ನ ನಡುವೆ ನಡೆಯುವ ಸಂಭಾಷಣೆಯನ್ನು ದಾಖಲಿಸಿಕೊಳ್ಳುವಂತೆ ನೀಡಿದ್ದರು. ಆ ವಾಯ್ಸ ರೆಕಾರ್ಡರನ್ನು ಹಾಜರುಪಡಿಸುವಂತೆ ದೂರುದಾರರಿಗೆ ಕೇಳಿದಾಗ, ತಾನು ಗಾಬರಿಯಲ್ಲಿ ವಾಯ್ಸ್ ರೆಕಾರ್ಡರನ್ನು ಆನ್ ಮಾಡಿ ಇಟ್ಟುಕೊಳ್ಳಲು ಮರೆತಿರುವುದಾಗಿ ತಿಳಿಸಿದರು. ನೆರಳುಸಾಕ್ಷಿಯಾದ ಚಾಸಾ-3ರವರನ್ನು ತನಿಖಾಧಿಕಾರಿ ವಿಚಾರಿಸಿದಾಗ ಅವರು ತಾನು ಪಿರ್ಯಾದಿದಾರರ ಜೊತೆಯಲ್ಲೇ ಇದ್ದು ಘಟನೆಯನ್ನು ಪ್ರತ್ಯಕ್ಷವಾಗಿ ಗಮನಿಸಿದ್ದು ಪಿರ್ಯಾದಿದಾರರು ಹೇಳಿದ ರೀತಿಯಲ್ಲೇ ವಿವರಿಸಿದರು. ಈ ಎಲ್ಲ ಪ್ರಕ್ರಿಯೆ ಬಗ್ಗೆ ಪಂಚನಾಮೆ ನಡೆಸಿದರು. ಆ ಪಂಚನಾಮೆಗೆ ನಾನು ಸಹಿ ಹಾಕಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು, ನಿಪಿ-3 ಎಂದು ಗುರುತಿಸಲ್ಪಟ್ಟಿದ್ದು ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ

ತನಿಖಾಧಿಕಾರಿ ನಿಪಿ-9ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿದರು. ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಎರಡೂ ಪಂಚನಾಮೆ ಕಾಲದಲ್ಲಿ ತನಿಖಾಧಿಕಾರಿ ಫೋಟೋಗಳನ್ನು ತೆಗೆಸಿರುತ್ತಾರೆ. ಅವುಗಳನ್ನು ಈಗ ನೋಡುತ್ತಿದ್ದು ಒಟ್ಟು 25 ಫೋಟೋಗಳಿದ್ದು ಅವುಗಳನ್ನು ನಿಪಿ-10 ರಿಂದ 34 ಎಂದು ಗುರುತಿಸಲಾಯಿತು. ನಿಪಿ-3ರ ಪಂಚನಾಮೆ ಕಾಲದಲ್ಲಿ ವಶಪಡಿಸಿಕೊಂಡ ನೋಟುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ 500ರೂ ಮುಖಬೆಲೆಯ ನೋಟುಗಳು ಅವೇ ಆಗಿರುತ್ತವೆ. ಅವುಗಳನ್ನು ಒಟ್ಟಾಗಿ ಎಂ.ಓ.4 ಎಂದು ಗುರುತಿಸಲಾಯಿತು. ನಂತರ ಆರೋಪಿತರನ್ನು ಕರೆದುಕೊಂಡು ಕಛೇರಿಗೆ ಹೋದರು. ಆಗ ಅವೇಳೆಯಾಗಿದ್ದರಿಂದ ಮಾರನೇ ದಿವಸ ಬರುವಂತೆ ನಮಗೆ ಸೂಚಿಸಿದರು.

8.ಮಾರನೇ ದಿವಸ ಬೆಳಿಗ್ಗೆ 10ಗಂಟೆಗೆ ಪುನಃ ನಾನು ಮತ್ತು ಚಾಸಾ-3ರವರು ಲೋಕಾಯುಕ್ತ ಕಛೇರಿಗೆ ಹೋದೆವು. ದೂರುದಾರರೂ ಬಂದಿದ್ದರು. ನಿಪಿ-2 ಮತ್ತು 3ರ ಸಮಯದಲ್ಲಿತೆಗೆದ ಫೋಟೋಗಳನ್ನು ಪ್ರಿಂಟ್ ಹಾಕಿಸಿ ಅವುಗಳನ್ನು ಮಹಜರ್ ಮೂಲಕ ವಶಪಡಿಸಿಕೊಂಡರು. ಮಹಜರನ್ನು ನಿಪಿ-35 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ-35(ಎ) ಎಂದು ಗುರುತಿಸಲಾಯಿತು. ನಂತರ ದೂರುದಾರರಿಗೆ ಮೆಮೋರಿ ಕಾರ್ಡನ್ನು ಹಾಜರುಪಡಿಸುವಂತೆ ತಿಳಿಸಿದರು. ಅದರಂತೆ ಅವರು ಅದನ್ನು ಹಾಜರುಪಡಿಸಿದರು. ಆ ಮೆಮೋರಿ ಕಾರ್ಡನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ತೋರಿಸಿದಾಗ ಅದರಲ್ಲಿ 1ನೇ ಆರೋಪಿತರ ಸಂಭಾಷಣೆ ಇದ್ದವು. ಆ ಸಂಭಾಷಣೆಯನ್ನು ಸಿಡಿಗೆ ಅಳವಡಿಸಿದರು. ಆ ಧ್ವನಿಯನ್ನು ನಾವು ಕೇಳಿಸಿಕೊಂಡೆವು. ಆ ಸಿಡಿಗೆ ನಾನು ಸಹಿ ಹಾಕಿದೆನು. ಅದನ್ನು ವಶಪಡಿಸಿಕೊಂಡು ಪಂಚನಾಮೆ ನಡೆಸಿದರು. ಮೆಮೋರಿ ಕಾರ್ಡನ್ನು ವಶಪಡಿಸಿಕೊಂಡಾಗ ಮಾಡಿದ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-36 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ-36(ಎ) ಎಂದು

ಗುರುತಿಸಲಾಯಿತು. ಮೆಮೋರಿ ಕಾರ್ಡನ್ನು ಲ್ಯಾಪ್ ಟಾಪ್ ಗೆ ಅಳವಡಿಸಿದಾಗ ಅದರಲ್ಲಿ ಬೇರೆ ಫೋಟೋಗಳು ಮತ್ತು ಹಾಡುಗಳು ಇದ್ದವು, ಅದನ್ನು ಡಿಲಿಟ್ ಮಾಡಿಸಿ 1ನೇ ಆರೋಪಿತರ ಸಂಭಾಷಣೆಯನ್ನು ಮಾತ್ರ ಉಳಿಸಿದರು. ಆ ದಿವಸ ಮಾಡಿದ ಸಿಡಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೋರಿಸಿದ ಕವರಿನ ಮೇಲೆ ಇರುವ ಚೀಟಿಯಲ್ಲಿರುವ ಸಹಿ ನನ್ನದೆ. ಕವರನ್ನು ನಿಪಿ-37 ಎಂದು ಚೀಟಿಯನ್ನು ನಿಪಿ-37(1) ಎಂದು ಸಾಕ್ಷಿಯ ರುಜುವನ್ನು ನಿಪಿ-37(1)(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಕವರನ್ನು ತೆರೆದು ತೋರಿಸಿದಾಗ ಅದರಲ್ಲಿರುವ ಸಿಡಿ ಅದೇ ಎಂದು ಒಪ್ಪಿಕೊಂಡಿರುತ್ತಾರೆ. ಅದನ್ನು ನಿಪಿ-38 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-38(1) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಅವರು ಇಂದು ನ್ಯಾಯಾಲಯದ ಮುಂದೆ ಇದ್ದಾರೆ.

**ಪಾಟೀಸವಾಲುಃ 1ನೇ ಆರೋಪಿ ಪರ** ಶ್ರೀ ಕೆ ಎ ಎಸ್ **ವಕೀಲರಿಂದಃ**

ದಿಃ13-3-2017ಕ್ಕಿಂತ ಮುಂಚೆ ನಾನು ಎಸಿಬಿ ಕಛೇರಿಗೆ ಹೋಗಿಲ್ಲ. ದಿಃ13-3-2017 ಯಾವ ದಿನ/ವಾರ ಎಂದು ಈಗ ನನಗೆ ಹೇಳಲಾಗುವುದಿಲ್ಲ. ನನ್ನ ಕಛೇರಿಯ ಸಮಯ ಬೆಳಿಗ್ಗೆ 10 ರಿಂದ ಸಾಯಂಕಾಲ 5-30ರವರೆಗೆ ಇರುತ್ತದೆ. 13-3-2017ರಂದು ಬೆಳಿಗ್ಗೆ 10 ಗಂಟೆಗೆ ಕಛೇರಿಗೆ ಹೋಗಿದ್ದೆನು. ಹಾಜರಾತಿ ಪುಸ್ತಕಕ್ಕೆ ಸಹಿ ಹಾಕಿದ್ದೇನೆ. ಆಗ ನಮ್ಮ ಮೇಲಧಿಕಾರಿಗಳು ಡಿ ಹೆಚ್ ಒ ವೆಂಕಟೇಶ್ ರವರಾಗಿದ್ದರು. ಅದಿವಸ ಲೋಕಾಯುಕ್ತ ಕಛೇರಿಗೆ ಹೋಗುವಂತೆ ನಮಗೆ ಮೇಲಧಿಕಾರಿಗಳು ಲಿಖಿತ ಆದೇಶ ಮಾಡಿಲ್ಲ, ಮೌಖಿಕವಾಗಿ ತಿಳಿಸಿದರು. ಬೆಳಿಗ್ಗೆ 10ವರೆ -10ಮುಕ್ಕಾಲುಗಂಟೆಗೆ ಅಲ್ಲಿಗೆ ಹೋಗುವಂತೆ ತಿಳಿಸಿದರು. ಎಸಿಬಿ ಕಛೇರಿಯ ಸಿಬ್ಬಂದಿಗಳು ಬಂದು ನಮ್ಮನ್ನು ಕರೆದುಕೊಂಡು ಹೋದರು. ಅವರ ಇಲಾಖಾ ವಾಹನದಲ್ಲಿ ನನ್ನನ್ನು ಮತ್ತು ಚಾಸಾ3ರವರನ್ನು ಕರೆದುಕೊಂಡು ಹೋದರು. ನಾನು ಎಸಿಬಿ ಕಛೇರಿಗೆ ಹೋದಾಗ ತನಿಖಾಧಿಕಾರಿ ರಾಜು ಇದ್ದರು. ಲೋಕಾಯುಕ್ತ ಕಛೇರಿಗೆ ಹೋದಾಗ 11 ಗಂಟೆ ಆಗಿತ್ತು. ನಮ್ಮ ಕಛೇರಿಯಿಂದ ಎಸಿಬಿ ಕಛೇರಿಗೆ 1 ಕಿಮಿಾ ದೂರ ಇತ್ತು. ಅಲ್ಲಿ ದೂರುದಾರರು ಪೊಲೀಸ್

ಸಿಬ್ಬಂದಿಗಳು ಇದ್ದರು. ನಾವು ಅಲ್ಲಿಗೆ ಹೋದಾಗ ಮಾಹಿತಿಯನ್ನು ತನಿಖಾಧಿಕಾರಿ ಹೇಳಿದರು. ದೂರುದಾರರನ್ನು ನಾನುಖುದ್ದಾಗಿ ವಿಚಾರ ಮಾಡಿದೆನು. ನನಗೆ ಈ ಪ್ರಕರಣದಲ್ಲಿ ಬಂದು ಸಾಕ್ಷ್ಯ ನುಡಿಯಲು ನೋಟೀಸು ಜಾರಿ ಮಾಡಿದಾಗ ಲೋಕಾಯುಕ್ತ ಪೊಲೀಸರು ನನ್ನ ಹೇಳಿಕೆ ಪ್ರತಿಯನ್ನು ಕೊಟ್ಟಿದ್ದರು ಎಂದರೆ ಸರಿ. ಅದರಂತೆ ನಾನು ಸಾಕ್ಷ್ಯ ನುಡಿಯುತ್ತಿರುವುದು ಎಂದರೆ ಸರಿಯಲ್ಲ.

2.ರೆವಿನ್ಯೂ ಸ್ವತ್ತುಗಳ ಖಾತೆ ಬದಲಾವಣೆ ಇ-ಖಾತೆ ಪ್ರಕ್ರಿಯೆ ಬಗ್ಗೆ ನನಗೆ ತಿಳುವಳಿಕೆ ಇಲ್ಲ. ಚೆಕ್ಕುಬಂದಿ ಬದಲಾವಣೆ ಪಿಡಿಒರವರ ಕಾರ್ಯವ್ಯಾಪ್ತಿಗೆ ಬರುತ್ತದೆಯೇ ಎಂಬುದು ನನಗೆ ಗೊತ್ತಿಲ್ಲ. ದೂರುದಾರರ ದೂರಿನೊಂದಿಗೆ ಏನೇನು ದಾಖಲೆಗಳನ್ನು ಕೊಟ್ಟಿದ್ದರು ಎಂದರೆ ಸಾಕ್ಷಿಯು ದೂರನ್ನು ಮಾತ್ರ ತೋರಿಸಿದರು ಎನ್ನುತ್ತಾರೆ. ದೂರು ಅರ್ಜಿ ಕೈಬರವಣಿಗೆಯಲ್ಲಿ ಇತ್ತು. ನಾನು ಎಸಿಬಿ ಕಛೇರಿಗೆ ಹೋಗುವುದಕ್ಕಿಂತ ಮೊದಲೇ ದೂರುದಾರರು ದೂರ ಕೊಟ್ಟಿದ್ದರು. ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಸುಮಾರು ಒಂದು ಗಂಟೆಯವರೆಗೆ ಇದ್ದೆವು. ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪಂಚನಾಮೆ ನಡೆಸಿದರು, ಅದಕ್ಕೆ ನಾನು ಸಹಿ ಹಾಕಿದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ನೋಟುಗಳಿಗೆ ಫಿನಾಫ್ತಲಿನ್ ಪುಡಿ ಲೇಪನ ಮಾಡಿಸಿದರು, ಸೋಡಿಯಂ ಕಾರ್ಬೊನೇಟ್ ಧ್ರಾವಣ ತಯಾರಿಸಿದರು, ಅದರಲ್ಲಿ ನನ್ನ ಕೈಬೆರಳುಗಳನ್ನು ಅದ್ದಿಸಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಎಸಿಬಿ ಕಛೇರಿಯಿಂದ 1ನೇ ಆರೊಪಿತರ ಕಛೇರಿಗೆ ಸುಮಾರು 60-70 ಕಿಮಿಾ ದೂರ ಆಗುತ್ತದೆ. ನಾನು, ಚಾಸಾ-3 ಮತ್ತು ಪೊಲೀಸ್ ಸಿಬ್ಬಂದಿಗಳು ಟಾಟಾಸುಮೋದಲ್ಲಿ ಹೋದೆವು. ಸ್ವಿಫ್ಟ್ ಕಾರಿನಲ್ಲಿ ತನಿಖಾಧಿಕಾರಿ ಮತ್ತು ಇನ್ಸೆಕ್ಟರ್ ರವರು ಬಂದಿದ್ದರು. ನಾವು ಸ್ಥಳಕ್ಕೆ ಹೋದಾಗ 3 ಗಂಟೆ ಆಗಿತ್ತು. ಅವರು ನಮ್ಮ ಜೊತೆಯಲ್ಲೇ ಬಂದರು. ಎಲ್ಲರೂ ಒಟ್ಟಿಗೇ ಹೋಗಿದ್ದೆವು. ಆರೋಪಿ ಕಛೇರಿಯಿಂದ ಸುಮಾರು 200ಮಿಾ ಅಂತರದಲ್ಲಿ ವಾಹನವನ್ನು ನಿಲ್ಲಿಸಿದೆವು. ದೂರುದಾರರು ಮತ್ತು ಚಾಸಾ3ರವರು 1ನೇ ಆರೋಪಿತರ ಕಛೇಗೆ

ಹೋದಾಗ ನಾನು ಮತ್ತು ಇತರರು ಪಂಚಾಯಿತಿ ಕಛೇರಿಯ ಮುಂದುಗಡೆ ನಿಂತಿದ್ದೆವು. ನಾವು ನಿಂತ ಸ್ಥಳಕ್ಕೆ ಆರೋಪಿತರ ಕಛೇರಿ ಕಾಣುತ್ತಿರಲಿಲ್ಲ. ದೂರುದಾರರು 1ನೇ ಆರೋಪಿತರ ಕಛೇರಿ ಒಳಗಡೆ ಹೋದ ನಂತರ ಸುಮಾರು ಒಂದು ಗಂಟೆವರೆಗೆ ನಾವು ಕಾಯುತ್ತಿದ್ದೆವು. ಅವರು ಸಂಜೆ ಸುಮಾರು 4-30 ಗಂಟೆಗೆ ಹೊರಬಂದು ಸಂಜ್ಞೆ ನೀಡಿದರು. ನಾವು 1ನೇ ಆರೋಪಿಯ ಕಛೇರಿಗೆ ಹೋದಾಗ ಚಾಸಾ-3ರವರು ಹೊರಗಡೆ ಇದ್ದರು. ಆ ಕಛೇರಿಯಲ್ಲಿ ಒಂದು ಹಾಲ್ ಹಾಗೂ ಒಂದು ರೂಮು ಇತ್ತು. ಅಲ್ಲಿ ಎಷ್ಟು ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದರೆಂದು ಹೇಳಲಾಗುವುದಿಲ್ಲ. ಅಲ್ಲಿ 4-5 ಜನ ಸಾರ್ವಜನಿಕರು ಇದ್ದರು. ಎಸಿಬಿ ಕಛೇರಿಯಿಂದ ಆರೋಪಿ ಕಛೇರಿಗೆ ಹೋಗುವಾಗ ತನಿಖಾಧಿಕಾರಿ ಏನೇನು ವಸ್ತುಗಳನ್ನು ತೆಗೆದುಕೊಂಡು ಹೋಗಿದ್ದರೆಂದು ನನಗೆ ಗೊತ್ತಿಲ್ಲ. ಸ್ಥಳದ ಚೆಕ್ಕುಬಂದಿಯನ್ನು ನಾನು ತನಿಖಾಧಿಕಾರಿಗೆ ಹೇಳಿಲ್ಲ. 1ನೇ ಆರೋಪಿತರ ಕಛೇರಿಗೆ ದೂರುದಾರರು ಹೋದರು ಅಲ್ಲಿ ಅವರಿಗೆ ಹಣ ಕೊಡಲು ಹೋದಾಗ ಅವರು 2ನೇ ಆರೋಪಿತರಿಗೆ ಕೊಡುವಂತೆ ಹೇಳಿದರೆಂದು ದೂರುದಾರರು ತಿಳಿಸಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 1ನೇ ಆರೋಪಿತರು ತನಿಖಾಧಿಕಾರಿ ಲಂಚದ ಹಣ ಎಲ್ಲಿ ಎಂದು ಕೇಳಿದಾಗ ಸದರಿಯವರು ಬ್ಯಾಗಿನಿಂದ ತೆಗೆದುಕೊಟ್ಟರೆನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಳಂದ ಎಂಬುವವರು ಖಾತಾಬದಲಾವಣೆಗೆ ಮತ್ತು ಚೆಕ್ಕುಬಂದಿ ಕೇಳಿ ಕೊಟ್ಟ ಅರ್ಜಿಯನ್ನು ನಾನು ನೋಡಿದ್ದೇನಾ ಎಂದರೆ ಸಾಕ್ಷಿಯು ನಿಪಿ-8ನ್ನು ಪಡೆದುಕೊಂಡಾಗ ಗೊತ್ತಾಯಿತು ಎನ್ನುತ್ತಾರೆ. ಆ ಅರ್ಜಿಯನ್ನು ಯಾರು ಸ್ವೀಕರಿಸಿದ್ದಾರೆಂದು ನನಗೆ ಗೊತ್ತಿಲ್ಲ. ಚೆಕ್ಕುಬಂದಿ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿದ್ದನ್ನು ಯಾರು ಸ್ವೀಕರಿಸಿದ್ದಾರೆಂದು ನನಗೆ ಗೊತ್ತಿಲ್ಲ.

3.ಅಲ್ಲಿ 1 ಮತ್ತು 2ನೇ ಆರೋಪಿತರ ಕೈಬೆರಳುಗಳನ್ನು ಪ್ರತ್ಯೇಕ ದ್ರಾವಣದಲ್ಲಿ ತೊಳೆಸಿದರು, ಅದು ಗುಲಾಬಿ ಬಣ್ಣಕ್ಕೆ ತಿರುಗಿತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಮಾರನೇ ದಿವಸ ಠಾಣೆಗೆ ಕರೆಸಿದರು, ಅಲ್ಲಿ ಫೋಟೋ ಮತ್ತು ಮೆಮೋರಿ ಕಾರ್ಡನ್ನು

ವಶಪಡಿಸಿಕೊಂಡು ಮಹಜರು ನಡೆಸಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರ ಕಛೇರಿಯಿಂದ ಎಸಿಬಿ ಕಛೇರಿಗೆ ಬಂದಾಗ ಸುಮಾರು 11 - 11ವರೆಗಂಟೆ ಆಗಿತ್ತು. ಅಲ್ಲಿ ಕಛೇರಿಯಲ್ಲಿ ಆಗ ಯಾವುದೇ ದಾಖಲೆಗೆ ಸಹಿ ಹಾಕಿಸಿಕೊಂಡಿಲ್ಲ. ಬೆಳಿಗ್ಗೆ ಬಂದಾಗ ಫೋಟೋಗೆ ಸಂಬಂಧಿಸಿದ ಪಂಚನಾಮೆ ಮತ್ತು ಮೆಮೋರಿ ಕಾರ್ಡ್ ಗೆ ಸಂಬಂಧಿಸಿದ ಪಂಚನಾಮೆಗೆ ಸಹಿ ಪಡೆದರು. ವಾಯ್ಸ್ ರೆಕಾರ್ಡರನ್ನು ನಮಗೆ ಪ್ಲೇ ಮಾಡಿ ಆಲಿಸಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಎಂ.ಒ.1 ರಿಂದ 3ನ್ನು ನೋಡದೆ, ನಿಖರವಾಗಿ ಅದು ಇಂತಹದೇ ಸಂದರ್ಭದಲ್ಲಿ ಸಂಗ್ರಹಿಸಿದ್ದು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ಆರೋಪಿತರ ಕಛೇರಿಯಲ್ಲಿ ಯಾವುದೇ ದಾಖಲೆಗಳನ್ನು ವಶಪಡಿಸಿಕೊಂಡಿಲ್ಲ ಮತ್ತು ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ, ಎಸಿಬಿ ಕಛೇರಿಯಲ್ಲಿ ಸಹಿ ಹಾಕಿದ್ದು ಎಂದರೆ ಸರಿಯಲ್ಲ.

4.ಲೋಕಾಯುಕ್ತ ಅಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ 1ನೇ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ** 2ನೇ **ಆರೋಪಿ ಪರ** ಶ್ರೀ ಹೆಚ್ ಎಲ್ ಡಿ **ವಕೀಲರಿಂದಃ**

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಕಲಾಪದ ವೇಳೆ ಮುಗಿದಿದ್ದರಿಂದ ಅದನ್ನು ಮಧ್ಯಾಹ್ನಕ್ಕೆ ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**

**ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಿದೆ.**

**ಪಾಟೀಸವಾಲುಃ** 2ನೇ **ಆರೋಪಿ ಪರ** ಶ್ರೀ ಹೆಚ್ ಎಲ್ ಡಿ **ವಕೀಲರಿಂದಃ**

ಮಹಜರಿನಲ್ಲಿ ದೂರುದಾರರು ಯಾವ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದರು, ಯಾವ ಕಂಪೆನಿಯ ಲ್ಯಾಪ್ ಟಾಪ್ ಗೆ ಅಳವಡಿಸಿ ಅದನ್ನು ಸಿಡಿ ಮಾಡಿಕೊಂಡರೆಂದು ಬರೆದಿಲ್ಲ ಎಂದರೆ ಸಾಕ್ಷಿಯು ಮೊಬೈಲ್ ಮೈಕ್ರೋ ಮ್ಯಾಕ್ಸ್ ಕಂಪೆನಿಯದು, ಲ್ಯಾಪ್ ಟಾಪ್ ಯಾವ ಕಂಪೆನಿಯದೆಂದು ಗೊತ್ತಿಲ್ಲ ಎನ್ನುತ್ತಾರೆ. ಮಹಜರಿನಲ್ಲಿ ಯಾವ ಕಂಪೆನಿಯ ಮೊಬೈಲ್ ಎಂದು ನಮೂದಿಸಿಲ್ಲ ಎಂದರೆ ಸರಿ. ನಿಪಿ-3ಕ್ಕೆ 14ನೇ ತಾರೀಖಿನಂದು ಎಸಿಬಿ ಕಛೇರಿಯಲ್ಲಿ ಸಹಿ ಹಾಕಿದ್ದು ಎಂದರೆ ಸರಿಯಲ್ಲ.

2.2ನೇ ಆರೋಪಿತರನ್ನು ನಾನು ಇದೇ ದಿನ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿದ್ದು ಎಂದರೆ ಸರಿ. ಎಂ.ಒ.4ರ ಹಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಕೂಡ ಎಸಿಬಿಯವರ ಮಾತುಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ.ಒ.1 ರಿಂದ 3ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. (ಉಳಿದ ಪಾಟೀಸವಾಲಿಗೆ 1ನೇ ಆರೋಪಿತರ ಪರ ಮಾಡಿದ ಪಾಟೀಸವಾಲನ್ನು ಅಳವಡಿಸುವುದಾಗಿ ಹೇಳುತ್ತಾರೆ, ಅನುಮತಿಸಿದೆ)

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**